ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.523/2021

| | | |
|---|---|---|
| ಸಾಕ್ಷಿದಾರರ ಹೆಸರು | ಡಾ. ವೃಂದಾ | ಸಿ.ಡಬ್ಲ್ಯೂ: 5 ಪಿ.ಡಬ್ಲ್ಯೂ: 5 |
| ತಂದೆಯ ಹೆಸರು | ಮೋಹನ್ ಪ್ರಭು | |
| ವಯಸ್ಸು | 55 ವರ್ಷ | |
| ಉದ್ಯೋಗ | ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಬೇಲೂರು | |
| ವಾಸ ಸ್ಥಳ | ಬೇಲೂರು | |

ದಿನಾಂಕ: 01.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನಾನು 2014 ರಿಂದ 2025 ಜುಲೈ ತಿಂಗಳ ವರೆಗೂ ನಾನು ಮೂಡಿಗೆರೆ ಎಂ.ಜಿ.ಎಂ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 14.06.2019 ರಂದು ಸಂಜೆ 6.40 ರ ಸುಮಾರಿಗೆ ಚಾಸಾ.1 ಮಂಜುನಾಥ ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಎಂ.ಜಿ.ಎಂ ಆಸ್ಪತ್ರೆಗೆ ಬಂದಿದ್ದು ನಾನು ಸದರಿ ರವರನ್ನು ಪರೀಕ್ಷಿಸಿ ಅವರಿಗೆ ಚಿಕಿತ್ಸೆ ನೀಡಿರುತ್ತೇನೆ. ಚಾಸಾ.1 ರವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಎಡಮುಂಗೈ ಮೇಲೆ ½ x ¼ x ¼ ಅಳತೆಯ ತರಚಿದ ಗಾಯ. ಚಾಸಾ.1 ರವರನ್ನು ಪರೀಕ್ಷಿಸಿ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಚಾಸಾ.1 ರವರಿಗೆ ಆಗಿರುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಡಿ.ಎಸ್. ವಕೀಲರಿಂದ – ಆರೋಪಿತನ ಪರವಾಗಿ

3. ಚಾಸಾ.1 ರವರು ಚಿಕಿತ್ಸೆಗೆ ಬಂದಾಗ ತನಗೆ ಚಾಕು ಹಾಕಿದ್ದರಿಂದ ಗಾಯಗಳು ಆಗಿವೆ ಎಂದು ತಿಳಿಸಿದ್ದರು. ಗಾಯದ ಪ್ರಮಾಣ ಪತ್ರದಲ್ಲಿ ಆ ಬಗ್ಗೆ ನಾನು

ನಮೂದಿಸಿಲ್ಲ ಎಂದರೆ ಸರಿ. ಗಾಯದ ಪ್ರಮಾಣ ಪತ್ರವನ್ನು ಪಡೆಯುವಾಗ ಪೊಲೀಸರು ಸದರಿ ಚಾಕುವನ್ನು ನನ್ನ ಮುಂದೆ ಹಾಜರು ಪಡಿಸಿದ್ದು ನನಗೆ ನೆನಪಿಲ್ಲ. ಪೊಲೀಸರು ಆ ರೀತಿ ಚಾಕುವನ್ನು ನನ್ನ ಎದುರಿಗೆ ಹಾಜರು ಪಡಿಸಿದ್ದರೆ ಆ ಬಗ್ಗೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸುತ್ತಿದ್ದೆ ಎಂದರೆ ಸರಿ. ನಿ.ಪಿ.6 ರಲ್ಲಿ ನಮೂದಿಸಿರುವ ಗಾಯ ತೋಟದಲ್ಲಿ ಬಿದ್ದರೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಚಾಸಾ.1 ರವರು ಚಿಕಿತ್ಸೆಗೆ ಬಂದಾಗ ಅವರನ್ನು ಸುಂಕಸಾಲೆ ಮತ್ತು ಬಣಕಲ್ ನಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ಹೋದ ಬಗ್ಗೆ ನಾನು ವಿಚಾರಿಸಿಲ್ಲ. ಚಾಸಾ.1 ರವರಿಗೆ ಯಾವುದೇ ಗಾಯಗಳು ಆಗದೇ ಇದ್ದರು ಸಹ ಪೊಲೀಸರ ಒತ್ತಾಯದ ಮೇರೆಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ